ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡುವುದಕ್ಕೆ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, ಬಹಳ ಉತ್ತಮವಾದ ಸಲಹೆಯನ್ನು ಮಾನ್ಯ ಬಾಲರಾಜ್‌ರವರು ಕೊಟ್ಟಿರುತ್ತಾರೆ. ನಿಜವಾಗಲೂ ಇದೊಂದು ದುರಂತ, ನಿಮ್ಮ ಮಾಹಿತಿ ನಿಜ ಇರಬಹುದು, ಇಂತಹ ದೊಡ್ಡ ಊರಿನಲ್ಲಿ ದಿನಕ್ಕೆ 35 ಜನ ಮಕ್ಕಳು ಕಾಣೆಯಾಗುತ್ತಾರೆಂದರೆ, ಈ ಸಮಾಜ ಎಷ್ಟು ನಿರ್ಲಕ್ಷ್ಯ ತೋರಿಸುತ್ತಿದೆ ಎಂದರೆ child is the father of the man ಎನ್ನುವ ರೀತಿಯಾಗುತ್ತಿದೆ. ಮಕ್ಕಳು ದುರಂತಕ್ಕೆ ಒಳಗಾಗುವುದು ಬಹಳ ಹಿಂಸೆಯಾಗತಕ್ಕಂಥಾದ್ದು. ಈ ವಿಚಾರದಲ್ಲಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ H.K. ಕುಮಾರಸ್ವಾಮಿಯವರ ಜೊತೆಯಲ್ಲಿ ಮಾತನಾಡಿ ಈ ಬಗ್ಗೆ ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಿ, ನಾನು ತಮಗೆ ಭರವಸೆಯನ್ನು ಕೊಡುತ್ತೇನೆ.

ಕೆ.ಆರ.ಡಿ.ಸಿ.ಎಲ್. ಹಾಗೂ ಕೆ.ಸಿಪಿ

278 (1687) ಶ್ರೀ ಪಾಟೀಲ್ ಡಿ.ಆರ್. (ಗದಗ್) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ನದಿಗೆ ಕೂರ್ಲಹಳ್ಳಿ ಸೇತುವೆ ನಿರ್ಮಾಣವಾದುದರಿಂದ ಆ ಭಾಗಕ್ಕೆ ಪೂರ್ಣ ಪ್ರಯೋಜನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆ ನಿರ್ಮಾಣದಿಂದ ಕಾರವಾರ ಗುತ್ತಿ ರಾಷ್ಟ್ರೀಯ ಹೆದ್ದಾರಿ–63 ಹಾಗೂ ಸೋಲಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–13ನ್ನು ಹಡಗಲಿ–ಜಗಳೂರು ಮೂಲಕ ಜೋಡಿಸುವುದರಿಂದ ಬೆಂಗಳೂರು–ಗದಗ ರಸ್ತೆ ಅಂತರ ಎಷ್ಟು ಕಡಿಮೆಯಾಗುವುದು;

ಇ) ರಸ್ತೆ ಪ್ರಯಾಣ ಕಡಿಮೆಯಾಗುವುದರಿಂದ ಇಂಧನ ಉಳಿತಾಯ, ಸಮಯ ಉಳಿತಾಯ, ಪರಿಸರ ಹಾನಿ ತಪ್ಪುವುದನ್ನು ಸರ್ಕಾರ ಗಮನಿಸಿ, ಈ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡಿ ಕಾಲಮಿತಿಗೊಳಪಟ್ಟು ಈ ಸಂಪರ್ಕ ರಸ್ತೆಯನ್ನು ಕೆ.ಆರ್.ಡಿ.ಸಿ.ಎಲ್. ಅಥವಾ ಕೆಸಿಪ್ ಮೂಲಕ ಪೂರ್ಣಗೊಳಿಸಲು ತ್ವರಿತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಂದಿದೆ.

ಆ) ಈ ರೀತಿ ರಸ್ತೆಗಳನ್ನು ಜೋಡಿಸುವುದರಿಂದ ಗದಗ–ಬೆಂಗಳೂರು ರಸ್ತೆ ಅಂತರ ಸುಮಾರು 50.00 ಕಿಮೀ ನಷ್ಟು ಕಡಿಮೆಯಾಗಲಿದೆ.

ಇ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುದಾನದ ಲಭ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ನಮ್ಮ ಪುಣ್ಯ, ಪರಿಸ್ಥಿತಿಯ ಅರಿವು ಇದ್ದಂಥ ನೀವು ಉತ್ತರವನ್ನು ಕೊಡುವಂಥ ಪ್ರಸಂಗ ಬಂದಿದೆ. ನನಗೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುದಾನದ ಲಭ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು. ಅದರ ಬದಲಾಗಿ, ಮುಂದಿನ 2007–08ನೇ ಹಣಕಾಸು ವರ್ಷದಲ್ಲಿ ಕೈಗೆತ್ತಿಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಟ್ಟರೆ, ನಮಗೆ ಹಾಗೂ ನಿಮಗೆ ಸಮಾಧಾನವಾಗುತ್ತದೆ. ಮುಂದಿನ ಹಣಕಾಸು ವರ್ಷದಲ್ಲಿ ಈ ರಸ್ತೆ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು ಎನ್ನುವ ಭರವಸೆ ತಮ್ಮಿಂದ ಬರಬೇಕು ಮತ್ತು ಅದನ್ನು ಅನುಷ್ಠಾನಗೊಳಿಸುವಂಥ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :– ನಾನು ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಉಪಾಧ್ಯಕ್ಷರೆ :– ಪಾಟೀಲ್‌ರೆ, ನಿಮ್ಮ ಪ್ರಶ್ನೆ ಕೂಡ ಅದೇ ರೀತಿ ಇದೆ.

ಶ್ರೀ ಎಸ್.ಎಸ್. ಪಾಟೀಲ್ :– same, ನನ್ನ ಪ್ರಶ್ನೆ ಕೂಡ ಇದೆ.

ಉಪಾಧ್ಯಕ್ಷರು :– ಅದನ್ನು ಈಗಲೇ ಕೇಳಿ ಬಿಡುತ್ತೀರಾ?

ಶ್ರೀ ಎಸ್.ಎಸ್.ಪಾಟೀಲ್ :– ನನ್ನ ಪ್ರಶ್ನೆ ಕೂಡ ಹಿಂದೆ ಒಂದು ಇತ್ತು. ಅದು ಅನ್‌ಸ್ಟಾರ್ಡ್ ಆಗಿದೆ.

ಉಪಾಧ್ಯಕ್ಷರು :– ಇಲ್ಲಾ ಅದು ಸ್ಟಾರ್ಡ್ ಆಗಿದೆ. ನಿಮ್ಮ ಪ್ರಶ್ನೆ ಕೂಡ ರಸ್ತೆ ಸಮಸ್ಯೆ ಬಗ್ಗೆ.

ಶ್ರೀ ಎಸ್.ಎಸ್.ಪಾಟೀಲ್ :– ಇಲ್ಲಾ ಮತ್ತೊಂದು ಇದೆ.

ಶ್ರೀ ಡಿ.ಆರ್. ಪಾಟೀಲ್ :– ಇದು ಮೂರು ಜನ ಶಾಸಕರಿಗೆ ಸಂಬಂಧಪಟ್ಟಿದ್ದು ಇದೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಮಾನ್ಯ ಪ್ರಕಾಶ್‌ರವರೆ, ನಮ್ಮ ಅಡವಿಸೋಮಾಪುರದ ಹತ್ತಿರದಿಂದ ಹೈವೆ 63 ರಿಂದ ಹೈವೆ 13 ರವರೆಗೆ, ಬಹುಶಃ ಮುಂಡರಗಿ, ಹಡಗಲಿ, ಕೊಟ್ಟೂರು ಮೇಲೆ ಹಾದು 3–4 ಜಿಲ್ಲೆಗೆ ಇದು ಸಂಪರ್ಕವಾಗುತ್ತದೆ. ಸುಮಾರು 120 ಕಿ.ಮೀ ವರೆಗೆ ಕೂಡಿಸಿ ಬಿಟ್ಟರೆ, ಅದು ಹೈವೆ ಆಗುತ್ತದೆ. ಅದನ್ನು ನಾನು ಈಗಾಗಲೇ Central Minister ಆದ ಮಾನ್ಯ ಮುನಿಯಪ್ಪನವರನ್ನು ಆ ರಸ್ತೆಯಲ್ಲಿ ಕರೆದುಕೊಂಡು ಹೋಗಿದ್ದೆ. ಇದನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಿ ಕಳುಹಿಸಿ ಕೊಡಿ, ನಾನು ಖಂಡಿತವಾಗಿ ಮಂಜೂರು ಮಾಡುತ್ತೇನೆಂದು ಅವರು ಹೇಳಿದ್ದಾರೆ. ಅದನ್ನು ಕೆಸಿಫ್‌ದೊಳಗೆ ತೆಗೆದುಕೊಂಡು ಈಗ ಕೆಲಸವನ್ನು ಮುಗಿಸಿ ಆಮೇಲೆ ಅದನ್ನು ಹೈವೆ ಆಗಿ ಪರಿವರ್ತನೆ ಮಾಡೋಣವೆಂದು ಹೇಳಿರುತ್ತಾರೆ. ಬಳ್ಳಾರಿ ಪ್ಯಾಕೇಜಿನಲ್ಲಿ ನೀವು ಆ ಕಡೆ ಮಾಡಿದ್ದೀರಿ, ಆದರೆ ಅದು ಚೆನ್ನಾಗಿ ಆಗಲಿಲ್ಲ. ಅದು ಒಡೆದು ಕಿತ್ತಿ ಹೋಗಿದೆ. ಅದಕ್ಕಾಗಿ ಇದನ್ನು ಹೈವೆ ಮಾಡಲಿಕ್ಕೂ ಕೂಡ ದಯವಿಟ್ಟು ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಬಗ್ಗೆ ಹೇಳಬೇಕು. ಹೈವೆ ಆಗುವವರೆಗೆ ಮಾನ್ಯ ಡಿ.ಆರ್.ಪಾಟೀಲ್‌ರು ಹೇಳಿದ ಹಾಗೆ, ಮುಂದಿನ ಹಣಕಾಸು ವರ್ಷದಲ್ಲಿ ಕೆಸಿಫ್

ದಲ್ಲಿ ಹಾಕಿ ಅದನ್ನು ಸಂಪೂರ್ಣ ರಸ್ತೆ ಮಾಡಿಕೊಡಬೇಕೆಂದು ನಾನು ಕೂಡ ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಸಚಿವರು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ ಮಾನ್ಯ ಉಪಾಧ್ಯಕ್ಷರೇ, ಹಿರಿಯರಾದ ಉಭಯ ಸದಸ್ಯರುಗಳು ಹೇಳುವಂಥಾದ್ದು ವಾಸ್ತವಾಂಶ, ಆಗ ಬೆಂಗಳೂರು ತೀರ ಹತ್ತಿರವಾಗುತ್ತದೆ. ಒಳ್ಳೆಯ ರಸ್ತೆಯ ಸೌಕರ್ಯ ಹಿಂದುಳಿದ ತಾಲ್ಲೂಕುಗಳಿಗೆ ಲಭ್ಯವಾಗುತ್ತದೆ. ನಾನು ಕೂಡ ಅವರ ಜೊತೆಗೆ ಸೇರಿ, ಮಾನ್ಯ ಉಪ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಅಥವಾ ಪೂರಕ ಅಂದಾಜು ಮಂಡಿಸುವ ಸಂದರ್ಭದಲ್ಲಿಯಾಗಲಿ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿ ಮನವರಿಕೆ ಮಾಡಕೊಡಲಿಕ್ಕೆ ಪ್ರಯತ್ನವನ್ನು ಮಾಡಿಕೊಡುತ್ತೇನೆ. ಅದರ ಜೊತೆಗೆ ತಾವು ಹೇಳಿದಂತೆ, ಕನಿಷ್ಟಪಕ್ಷ ನಾವು ಅಂತರರಾಜ್ಯ ರಸ್ತೆಗಳಿಗೆ ಸಂಬಂಧಪಡುವಂಥ ಶೀರ್ಷಿಕೆ ಅಡಿಯಲ್ಲಿ ಮಾನ್ಯ ಮುನಿಯಪ್ಪನವರ ಮೂಲಕ ಅರ್ಧ ದುಡ್ಡನ್ನು, ನಾವು ಅರ್ಧ ದುಡ್ಡನ್ನು ಅವರು ಹಾಕಿ ರಸ್ತೆಯನ್ನು ತೆಗೆದುಕೊಳ್ಳುವ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :– ನಿಮ್ಮಿಂದ ನಮಗೆ ಭರವಸೆ ಬೇಕು ಸರ್. ಅವರಿಗೆ ಹೇಳಿ, ಇವರಿಗೆ ಹೇಳಿ, ಪ್ರಯತ್ನ ಮಾಡುತ್ತೇನೆ ಎನ್ನುವುದು ಬೇಕಾಗಿಲ್ಲ. ಇದು ಎಲ್ಲರಿಗೂ ಅನುಕೂಲವಾಗುವಂಥ ರಸ್ತೆ, ಅದಕ್ಕೆ ದಯವಿಟ್ಟು ಈ ಮುಂದಿನ ಹಣಕಾಸು ವರ್ಷದಲ್ಲಿ ಅದನ್ನು ಕೆಆರ್‌ಡಿಸಿಎಲ್ ಮುಖಾಂತರ ಅಥವಾ ಕೆಸಿಫ್ ಮುಖಾಂತರ ಕೈಗೆತ್ತಿಕೊಳ್ಳುತ್ತೇವೆ ಎನ್ನುವ ಭರವಸೆ ತಮ್ಮಿಂದ ಬರಬೇಕು. ನಿಮ್ಮ ಭರವಸೆ ಬಂದರೆ ಮಾನ್ಯ ರೇವಣ್ಣನವರು ಹಾಗೂ ಯಡಿಯೂರಪ್ಪನವರು ಅನುಕೂಲ ಮಾಡುತ್ತಾರೆ. ಜನರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಅದಕ್ಕಾಗಿ ತಾವು ಆ ಭರವಸೆಯನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್:– ಎಲ್ಲರೂ ಇನ್‌ವಾಲ್ವ್ ಆಗಿ ಪ್ರಯತ್ನ ಮಾಡೋಣ.